ಅರ್ಧ ಗಂಟೆ ಕಾಲಾವಧಿಯ ಚರ್ಚೆ

ವಿಷಯ:—ಅಬ್ಕಾರಿ ಕಂಟ್ರಾಕ್ಟರುಗಳಿಂದ ರಾಜ್ಯ ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ವಸೂಲಿ.

ಶ್ರೀ ಗೋಪಾಲ ಮಯಕಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ಅಬ್ಕಾರಿ ಕಂಟ್ರಾಕ್ಟರುದಾರರುಗಳಿಂದ ರಾಜ್ಯ ಸರ್ಕಾರಕ್ಕೆ ಸುಮಾರು ೩೬ ಕೋಟಿ ೧೬ ಲಕ್ಷ ರೂಪಾಯಿಗಳನ್ನು ಬಾಕಿ ಬರಬೇಕಾಗಿದ್ದು ; ಈ ಹಣವನ್ನು ಕಂದಾಯ ರೂಪಾದಲ್ಲಿ ವಸೂಲು ಮಾಡಲಾಗುವುದೆಂದು ನಾನು ಕಳೆದ ಅಧಿವೇಶನದಲ್ಲಿ ಪ್ರಸ್ತಾಪ ಮಾಡಿದಾಗ, ಮಾನ್ಯ ಅಬ್ಕಾರಿ ಮಂತ್ರಿಯವರು ಉತ್ತರ ಕೊಟ್ಟಿದ್ದರು. ಅದರಂತೆ ಮಾನ್ಯ ಮಂತ್ರಿಯವರು ಕಂದಾಯ ರೂಪದಲ್ಲಿ ಎಷ್ಟು ಹಣ ವಸೂಲು ಮಾಡಿದ್ದಾರೆಂಬುದನ್ನು ತಿಳಿಸಬೇಕು, ಅಲ್ಲದೆ, ಕಂಟ್ರಾಕ್ಟರುಗಳ ಹೆಸರುಗಳನ್ನು ಕೊಡಬೇಕೆಂದು ಹೇಳಿದ್ದೆ ಅದಕ್ಕೆ ಒಂದು ದೊಡ್ಡ ಪಟ್ಟಿ ಇದೆಯೆಂದು ಹೇಳಿದ್ದರು. ಯಾವ ಯಾವ ಕಂಟ್ರಾಕ್ಟರುಗಳು ಎಷ್ಟೆಷ್ಟು ಕೊಡಬೇಕೆಂಬುದನ್ನು ದಯವಿಟ್ಟು ತಿಳಿಸಬೇಕು ತಮಗೆ ತಿಳಿದಂತೆ ಕಂಟ್ರಾಕ್ಟ್ ಕೊಡಬೇಕಾದರೆ ಸರ್ಕಾರದಲ್ಲಿ ಒಂದು ಬೈಲಾ ಇದೆ. ಆ ಬೈಲಾ ಪ್ರಕಾರ ಎರಡು ತಿಂಗಳ ಹಣವನ್ನು ಡಿಪಾಸಿಟ್ ಇಡಬೇಕು ಒಂದು ತಿಂಗಳು ಬ್ಯಾಂಕ್ ಗ್ಯಾರಿಂಟಿ ಕೊಡಬೇಕು. ಮೂರು ತಿಂಗಳೊಳಗೆ ಹಣ ತುಂಬದೇ ಇದ್ದರೆ ಕಂಟ್ರಾಕ್ಟ್ ರಿಜಿಕ್ಟ್ ಮಾಡುವಂಥ ಅಧಿಕಾರ ಸರ್ಕಾರಕ್ಕೆ ಇದೆ. ಅದರ ಪ್ರಕಾರ ಎಷ್ಟು ಮಂದಿಗೆ ರಿಜಿಕ್ಟ್ ಮಾಡಿದ್ದೀರಿ ? ಇವತ್ತು ಕಂಟ್ರಾಕ್ಟ್‌ದಾರರು ಒಂದು ಲೀಟರಿಗೆ ೩೦ ರೂಪಾಯಿಗಳನ್ನು ಏರಿಸಿದ್ದಾರೆ. ೬೦ ರೂಪಾಯಿ ಏರಿಸಿದರೂ ಯಾರು ಕೂಡ ಅವರನ್ನೂ ಕೇಳುವವರಿಲ್ಲ, ಇದರಿಂದ ಶ್ರೀಮಂತರು ಶ್ರೀಮಂತರಾಗುವುದಕ್ಕೆ ಅನುಕೂಲವಾಗಿದೆಯೇ ಹೊರತು ಬಡವರಿಗೆ ಅನುಕೂಲ ಇಲ್ಲ. ಇನ್ನು ಇದನ್ನು ಬಾಟಲಿಯಲ್ಲಿ ತುಂಬಿ ಮಾರಾಟ ಮಾಡಬೇಕೆಂದು ಇದೆ. ಎಷ್ಟು ತಿಂಗಳು ಈ ರೀತಿ ತುಂಬ ಮಾರಾಟ ಮಾಡಿದ್ದಾರೆ ? ೫೦ ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕೆಂದು ಹೇಳಿ, ಸುಮಾರು ಒಂದೂವರೆ ಕೋಟಿ ರೂಪಾಯಿಗಳು ಸಾರಾಯಿ ಕೊಟ್ಟಿದ್ದೀರಿ ಅವರು ಕೈಕೊಟ್ಟು ಹೋದರೆ, ಸರ್ಕಾರ ತುಂಬುತ್ತದೆಯೆ ಕಂದಾಯ ರೂಪದಲ್ಲಿ ವಸೂಲು ಮಾಡುವುದಕ್ಕೆ ಅವರ ಹತ್ತಿರ ಆಸ್ತಿ ಏನಿದೆ ? ಅವರ ಅಡ್ರೆಸ್‌ಗಳೇ ಇಲ್ಲ. ಗೋಪಾಲ ಎಂದು ಇದೆ, ಯಾವ ಗೋಪಾಲ ? ಆ ಕಡೆ ಇದ್ದಾರೋ ಈ ಕಡೆ ಇದ್ದಾರೋ ಹೇಳಿ ಮಾಮೂಲು ಯಾರು ಕೊಡುತ್ತಾರೆ ಅವರಿಗೆ ಕಂಟ್ರಾಕ್ಟ್ ಕೊಟ್ಟಿದ್ದೀರಿ. ನಮ್ಮ ಪಕ್ಷದವರಿಗೆ ಯಾರಿಗೆ ಕೊಟ್ಟಿದ್ದೀರಿ ಅದನ್ನು ಹೇಳಿ. ಕೂಲಿ ಮಾಡುವವರು ಒಂದು ರೂಪಾಯಿ ಎರಡು ರೂಪಾಯಿ ಕಂದಾಯ ನಿಲ್ಲಿಸಿಕೊಂಡರೆ ವಸೂಲು ಮಾಡುತ್ತೀರಿ. ಆದರೆ, ೩೬ ಕೋಟಿ ವಸೂಲು ಮಾಡುವುದಕ್ಕೆ ಇದುವರೆಗೆ ಏತಕ್ಕೆ ಕ್ರಮ ಕೈಗೊಂಡಿಲ್ಲ ? ಚನ್ನಗಿರಿ ತಾಲ್ಲೂಕಿನಲ್ಲಿ ಎಷ್ಟು ಲಾಸ್ ಬಂದಿದೆ, ಎಷ್ಟು ನಷ್ಟವಾಗಿದೆ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು. ಕೆಲವು ಕಂಟ್ರಾಕ್ಟರು ಅಬ್ಕಾರಿ ಅಧಿಕಾರಿಗಳಿಗೆ ಫೋನ್ ಮೂಲಕ ದಬ್ಬಾಳಿಕೆ ಮಾಡಿದ್ದಾರೆ ಇದಂ ಸಚಿವರ ಗಮನಕ್ಕೆ ಬಂದಿದೆಯೆ ಈ ಬಗ್ಗೆ ಸಚಿವರು ಏನು ಕ್ರಮ ಕೈಗೊಂಡರು ಎಂದು ಹೇಳಬೇಕು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಇನ್ನು ಏನಾದರೂ ಮಾತನಾಡುವುದು ಇದೆಯೋ ಅಥವಾ ಇಷ್ಟೇ,

ಶ್ರೀ ಗೋಪಾಲ ಮುಕುಂದ ಕಾನಡೆ,—ಈಗ ಇಷ್ಟಕ್ಕೆ ಉತ್ತರ ಕೊಡಿ, ಅನಂತರ ಕೇಳುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಈಗ ನಮ್ಮ ಮುಂದೆ ಚರ್ಚೆಗೆ ಬಂದಿರತಕ್ಕ ವಿಷಯ ದಾಸಪ್ಪ ಅಂಡ್ ಸನ್ಸ್ ಕಂಟ್ರಾಕ್ಟರ್ ಅವರು ಸುಸ್ತಿದಾರರಾಗಿದ್ದಾರೆ ಆ ಕಂಟ್ರಾಕ್ಟ್‌ದಾರರನ್ನು ಏತಕ್ಕೆ ಮುಂದುವರಿಸಿದ್ದು ಎಂದು ಸಂಬಂಧಪಟ್ಟ ಪ್ರಶ್ನೆಯನ್ನು ಕೇಳಿದರು. ಈ ಬಗ್ಗೆ ಏನು ಮಾಹಿತಿ ಇದ್ದರೂ ಈ ಸದನದ ಮುಂದೆ ಹೇಳಿದರೆ ಅದಕ್ಕೆ ಸಮರ್ಪಕವಾಗಿ ಉತ್ತರ ದೊರೆಯುತ್ತದೆ. ಬೇರೆ ಪ್ರಶ್ನೆ ಕೇಳುವುದಾದರೆ ಬೇರೆ ಪ್ರಶ್ನೆ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ಅಬ್ಕಾರಿ ಕಂಟ್ರಾಕ್ಟರುಗಳಿಂದ ಬರಬೇಕಾದ ಬಾಕಿ ಮೊಬಲಗಿನ ಬಗ್ಗೆ ಮೂರನೆಯ ಪಟ್ಟಿಯ ೫೩ (೫೨)ನೇ ಪ್ರಶ್ನೆಗೆ ನೀಡಿದ ಉತ್ತರದಿಂದ ಉದ್ಭವಿಸಿದ ವಿಚಾರದ ಬಗ್ಗೆ ಅರ್ಧ ಗಂಟೆಯ ಚರ್ಚೆ ನಡೆಸುವುದು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನಾನು ಆ ದಿನ ಉತ್ತರ ಕೊಡುತ್ತಾ ತಿಳಿಸಿದೆ. ಈ ಬಾಕಿದಾರರಿಗೂ ಆಕ್ಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಲಿಕ್ಕೆ ಅವಕಾಶ ಮಾಡಿಕೊಡತಕ್ಕದ್ದು ಹಿಂದಿನಿಂದಲೂ ನಡೆದು ಕೊಂಡುಬಂದಿದೆ. ಏತಕ್ಕೋಸ್ಕರ ಆ ರೀತಿ ಮಾಡಿದಂದ್ದು ಎನ್ನುವ ಬಗ್ಗೆ ವಿವರ ಕೊಟ್ಟಿದ್ದೇನೆ ಈ ಗುತ್ತೇದಾರರು ಎಲ್ಲಾ ಒಟ್ಟಿಗೆ ಸೇರಿ ಯಾವುದೋ ಒಂದು ಮೊಬಲಿಗೆ ಅವರು ಒಪ್ಪಂದ ಮಾಡಿಕೊಂಡು ಆಪ್ಷೇ ಹಣಕ್ಕೆ ಹರಾಜು ಕೂಗಿ ಹೆಚ್ಚುವರಿ ಹಣವನ್ನು ಎಲ್ಲರೂ ಹಂಚಿಕೊಳ್ಳತಕ್ಕ ಒಂದು ವ್ಯವಸ್ಥೆ ಇತ್ತು. ಅದನ್ನು ತಪ್ಪಿಸಬೇಕಾದರೆ ಇಲ್ಲಿ ಪೈಪೋಟಿ ಆಗತ್ಯ. ಗುತ್ತೇದಾರರಲ್ಲಿ ಪೈಪೋಟಿ ಇಲ್ಲದೇ ಹೋದರೆ ಸರ್ಕಾರಕ್ಕೆ ಬರತಕ್ಕ ಹಣ ಕಡಿಮೆಯಾಗುತ್ತದೆ. ಈ ಕಾರಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರು ಸಂಸ್ಥಿದಾರರಾಗಿದ್ದರೂ ಅವರಿಂದ ಮುಂದೆ ಹಣ ವಸೂಲು ಮಾಡಿಕೊಳ್ಳುವುದಕ್ಕೆ ಸಾಕಷ್ಟು ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡು ಅವರಿಗೆ ಹರಾಜಿನಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿ ಕೊಟ್ಟಿದೆ. ಅವರೇ ಹೈಯೆಸ್ಟ್ ಬಿಡೆದಾರರು. ಹಾಗೆ ಮಾಡಿಕೊಡದೇ ಹೋಗಿದ್ದರೆ ಸರ್ಕಾರಕ್ಕೆ ಎಷ್ಟು ಆದಾಯ ಬರಬೇಕಾಗಿತ್ತೋ. ಅದರ ಬಹುಪಾಲು ಅಂದರೆ ಶೇಕಡಾ ೩೦ ರಿಂದ ೪೦ರಷ್ಟು ಕಡಿಮೆ ಆಗುತ್ತಿತ್ತು. ಉದಾಹರಣೆಗೆ ಹೇಳುವುದಾದರೆ. ಹರಾಜಿನಲ್ಲಿ ಸಂಸ್ಥಿದಾರರು ಮುಂದುವರಿಯ ಕೂಡದು ಎಂದು ಏನು ಹೇಳುತ್ತಿದ್ದಾರೋ, ಆ ಪ್ರಕಾರ ಅವರು ಏನಾದರೂ ಹರಾಜಿನಲ್ಲಿ ಭಾಗವಹಿಸದೇ ಇದ್ದರೆ ಅಷ್ಟು ಹಣ ಕೂಡ ಬರುತ್ತಿರಲಿಲ್ಲ. ಸರ್ಕಾರ ಕೆಲವು ಸಂದರ್ಭಗಳಲ್ಲಿ ತನ್ನ ವಿವೇಚನೆ ಉಪ ಯೋಗಿಸಿ ಪೈಪೋಟಿ ಸೃಷ್ಟಿ ಮಾಡಲಿಕ್ಕೋಸ್ಕರ ಕೆಲವು ಸಂಸ್ಥಿದಾರ ಗುತ್ತೇದಾರರಿಗೆ ಹರಾಜಿನಲ್ಲಿ ಭಾಗವಹಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದು ಉಂಟು ಇದು ಈಗ ಮಾತ್ರ ಅಲ್ಲ. ೧೯೫೦-೫೧ ರಿಂದಲೂ ಈ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದಿದೆ ಆದರ ಬಗ್ಗೆ ನನ್ನ ಹತ್ತಿರಪಟ್ಟಿ ಇದೆ. ಆದ್ದರಿಂದ ನಾವು ದುರುದ್ದೇಶದಿಂದ ಸಂಸ್ಥಿದಾರರಿಗೆ ಹರಾಜಿನಲ್ಲಿ ಭಾಗವಹಿಸಲಿಕ್ಕೆ ಅವಕಾಶ ಕೊಟ್ಟಿದ್ದೇವೆಂದು ಹೇಳುವುದು ಸತ್ಯಕ್ಕೆ ಬಹಳ ದೂರ, ದೂರ ದೂರವಾದ ವಿಚಾರ.ಸರ್ಕಾರದ ಹಿತವನ್ನು ದೃಷ್ಟಿಯಲ್ಲಿಟ್ಟು ಕೊಂಡು, ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿಗೆ ಹಣವನ್ನು ಶೇಖರಣೆ ಮಾಡಬೇಕೆಂದು ನಾವು ಮಾಡಿದ್ದೇವೆ. ಮಧ್ಯವರ್ತಿ ಜನಗಳು ಒಟ್ಟಿಗೇ ಸೇರಿ ಸರ್ಕಾರಕ್ಕೆ ಬರಬೇಕಾದ ಹಣವನ್ನು ಅವರವರೇ ಹಂಚಿಕೊಳ್ಳು ತ್ತಿದ್ದುದನ್ನು ತಪ್ಪಿಸಬೇಕೆಂಬ ಸದುದ್ದೇಶದಿಂದ ನಾವು ಹೀಗೆ ಮಾಡಿದ್ದೇವೆ...

ಅಧ್ಯಕ್ಷರು.—ಇದುವರೆಗೂ ನೀವು ವಸೂಲ್ಮಾಡುವುದಕ್ಕೆ ಏತಕ್ಕೆ ಆಗಲಿಲ್ಲ ? ಇಷ್ಟೊಂದು ತಡ ಏತಕ್ಕೆ ಆಯಿತೆಂದು ಅವರು ಕೇಳುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹರಾಜಿನಲ್ಲಿ ಇವರಿಗೆ ಅವಕಾಶ ಕೊಡಬಾರದೆಂದು ನ್ಯಾಯಾಲಯದವರು ಹೇಳಿದ್ದರೂ ಕೂಡ ನೀವು ಮತ್ತೆ ಅವಕಾಶ ಕೊಡುವುದಕ್ಕೆ ಏನಾದರೂ ನಿಯಮ ಇದೆಯೆ ?

ಶ್ರೀ ಹೆಚ್.ಟಿ. ಕೃಷ್ಣಪ್ಪ.—ನ್ಯಾಯಾಲಯ ಏನು ಆದೇಶ ನೀಡಿದೆ ಆದರ ಪ್ರಕಾರ ನಾವು ನಡೆದುಕೊಂಡಿದ್ದೇವೆ ಪುನಃ ಆಕ್ಷನ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಅವರು ಎಲ್ಲೆಲ್ಲಿ ಹರಾಜು ಮಾಡಬಹುದೆಂದು ಹೇಳಿದ್ದಾರೆ ಅಲ್ಲೆಲ್ಲಾ ನಾವು ಮಾಡಿದ್ದೇವೆ. ನಿರ್ದಿಷ್ಟವಾದ ಪ್ರಕರಣ ಯಾವು ದಾದರೂ ಇದ್ದರೆ ತಾವು ಹೇಳಬಹುದು. ಸುಮಾರು ೩೬ ಕೋಟಿ ರೂಪಾಯಿಗಳನ್ನು ನಾವು ವಸೂಲು ಮಾಡಬೇಕಾಗಿದೆ. ಸಂಸ್ಥಿದಾರರು ಬೇರೆ ಬೇರೆ ಕಾರಣಗಳನ್ನು ನ್ಯಾಯಾಲಯದ ಮುಂದಿಟ್ಟು ತಡೆಯಾಜ್ಞೆಯನ್ನು ತಂದಿದ್ದರಿಂದ ಆ ಹಣವನ್ನು ನಾವು ವಸೂಲ್ಮಾಡುವುದಕ್ಕೆ ಆಗಿಲ್ಲ ಇನ್ನೂ ನಾಲ್ಕೂ ವರೆ ಕೋಟಿ ರೂಪಾಯಿಗಳನ್ನು ನಾವು ವಸೂಲ್ಮಾಡಬೇಕಾಗಿದೆ. ಇದನ್ನು ಅವರಿಂದ ವಸೂಲ್ಮಾಡು ವಂತೆ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ. ಉಳಿದ ಹಣವನ್ನು ಈ ತಿಂಗಳ ೨೫ನೇ ತಾರೀಖಿನೊಳಗಾಗಿ ಕೊಡಬೇಕೆಂದು ಅವರ ಮೇಲೆ ಕಡ್ಡಾಯವನ್ನು ಹಾಕಿದ್ದೇವೆ. ಆದರೆ ಇದುವರೆಗೆ ಎಷ್ಟು ಹಣವನ್ನು ವಸೂಲ್ಮಾಡಲಾಗಿದೆ ಎಂಬುದೂ ಇನ್ನೂ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೩೬ ಕೋಟಿಯಲ್ಲಿ ಎಷ್ಟು ಹಣವನ್ನು ವಸೂಲ್ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕೋರ್ಟ್‌ನಿಂದ ತಡೆಯಾಜ್ಞೆ ಬಂದಿರುವುದರಿಂದ ನಾವು ಆ ಹಣವನ್ನು ವಸೂಲ್ಮಾಡುವುದಕ್ಕಾಗುತ್ತಿಲ್ಲ. ೨೫ ಕೋಟಿ ರೂಪಾಯಿಗಳಿಗೆ ತಡೆಯಾಜ್ಞೆ ಬಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೩೬ ಕೋಟಿ ರೂಪಾಯಿಗೆ ಎಂದು ತಾವು ಹೇಳಿದಿರಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ —ಇದಂ ಕಳೆದವರ್ಷದ್ದು. ೪.೫೫ ಕೋಟಿ ರೂಪಾಯಿಗಳಿಗೆ ಬ್ಯಾಂಕ್ ಗ್ಯಾರಂಟಿ ಇದೆ. ಇದನ್ನು ನಾವು ವಸೂಲ್ಮಾಡಿಕೊಳ್ಳಬಹುದು. ನಮಗೆ ಬರಬೇಕಾದ ಒಟ್ಟು ಮೊಬಲಗನ್ನು ಈ ತಿಂಗಳ ೨೫ನೇ ತಾರೀಖಿನೊಳಗಾಗಿ ವಸೂಲ್ಮಾಡುತ್ತೇವೆ. ಅವರೂ ಕೂಡ ಅಷ್ಟರೊಳಗೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಕಳೆದ ೨ ವರ್ಷದಿಂದಲೂ ಕೊಡದೇ ಇರತಕ್ಕ ವ್ಯಕ್ತಿ ಈ ತಿಂಗಳ ೨೫ನೇ ತಾರೀಖಿನೊಳಗಾಗಿ ಇಷ್ಟೊಂದು ಹಣವನ್ನು ಕೊಟ್ಟುಬಿಡುತ್ತಾನೆಯೇ? ಅದು ಹೇಗೆ ಸಾಧ್ಯವಾಗುತ್ತದೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ವಸೂಲ್ಮಾಡುವುದಕ್ಕೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ

ಅಧ್ಯಕ್ಷರು.—ವಸೂಲಾತಿ ಕ್ರಮ ಎಂದರೇನು? ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಗೋಪಾಲ ಮಂಕುಂದ ಕಾನಡೆ.—ಮಾನ್ಯ ಅಧ್ಯಕ್ಷರೆ, ನಾನಂ ಕೇಳಿದ್ದುದು ಕಂಟ್ರಾಕ್ಟರ್‌ಗಳ ಹೆಸರುಗಳನ್ನು. ಆದರೆ ಆ ಕಂಟ್ರಾಕ್ಟರ್‌ಗಳ ಹೆಸರುಗಳನ್ನು ಹೇಳುವುದಕ್ಕೆ ಮಾನ್ಯ ಮಂತ್ರಿಗಳಂ ಹೆದರುತ್ತಿದ್ದಾರೆ. ಕಾರಣ ಏನೋ ಗೊತ್ತಿಲ್ಲ.

ಶ್ರೀ ಹೆಚ್. ಟಿ. ಕೃಷ್ಣಪ್ಪ.— ನನಗೆ ಹೆದರಿಕೆ ಏನೂ ಇಲ್ಲ. ಬೇಕಾದರೆ ಪಟ್ಟಿಯನ್ನು, ಓದುತ್ತೇನೆ. ಬೆಂಗಳೂರು ಜಿಲ್ಲೆಯಲ್ಲಿ ಹೆಚ್. ದಾಸಪ್ಪ ...

ಶ್ರೀ ಗೋಪಾಲ ಮುಕುಂದ ಕಾನಡೆ.—ಸ್ವಾಮಿ, ನಮ್ಮ ಹತ್ತಿರವೂ ಆ ಪಟ್ಟಿ ಇದೆ ನೀವು ಏತಕ್ಕೆ ಹೆದರುತ್ತೀರಿ? ಧೈರ್ಯವಾಗಿ ಹೇಳಿ. ಇದು ಎಕ್ಸೈಸ್ ಮತ್ತು ಬೇರೆ ವಿಚಾರಕ್ಕೆ ಸಂಬಂಧ ಪಟ್ಟಿದ್ದು

ಶ್ರೀ ಕೆ. ಎಚ್. ಶ್ರೀನಿವಾಸ್.—ಆ ಲಕ್ಷ್ಮೀ ಪುತ್ರರ ಹೆಸರಿನ ನಾಮಂ ಪಠನ ಮಾಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನಂ ಹಾರಿಕೆ ಉತ್ತರವನ್ನು ಹೇಳುತ್ತಿಲ್ಲ. ತೋರಿಕೆಯ ಉತ್ತರವನ್ನು ಹೇಳುತ್ತಿಲ್ಲ. ಆಧಾರಿತವಾದಂಥ ಉತ್ತರವನ್ನು ಹೇಳಂತಿದ್ದೇನೆ. ಕೇಳತಕ್ಕಂಥವರು ಸೌಜನ್ಯದಿಂದ ಕೇಳಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಅದರ ತಾತ್ಪರ್ಯ ಇಷ್ಟೇ. ಬಾಕಿ ಪಟ್ಟಿ ಕೊಟ್ಟಿದ್ದೀರಿ ಇದರಲ್ಲಿ ಬಾಕಿದಾರರಿಗೂ ಆಕ್ಷನ್‌ನಲ್ಲಿ ಭಾಗವಹಿಸಲಿಕ್ಕೆ ಯಾರು ಯಾರಿಗೆ ಅವಕಾಶವನ್ನು ಕೊಟ್ಟಿದ್ದೀರಿ ಎನ್ನುವ ಬಗ್ಗೆ ವಿವರಣೆಯ ಪಟ್ಟಿಯನ್ನು ಹೊರಡಿಸಬೇಕು. ಅದನ್ನು ಕೇಳಿದ್ದೇವೆ. ಅದು ಒಂದು ಇಟ್ಟುಕೊಳ್ಳೋಣ. ಬಾಕಿ ವಸೂಲು ಮಾಡುವುದರಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಏನು ತೆಗೆದು ಕೊಂಡಿದ್ದೀರಿ? ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ರೀತಿ ಈ ಬಾಕಿ ವಸೂಲು ಮಾಡುತ್ತೇವೆಂದರೆ ಅವರಿಗೆ ಅಸೆಟ್ಸ್ ಇಲ್ಲ, ಲ್ಯಾಂಡ್ ಇಲ್ಲ. ಹೀಗಿರಬೇಕಾದರೆ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಕ್ರಮ ತೆಗೆದುಕೊಳ್ಳುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಇಂತಿಂಥ ಕ್ರಮ, ಈರೀತಿ ಜಾರಿ ಮಾಡುತ್ತೇವೆ, ಇಂಥ ಒಂದಂ ವಸ್ತುವನ್ನು ಹರಾಜಿಗೆ ತರುತ್ತೇವೆಂದು ಹೇಳಿ. ಆಗ ನಮಗೆ ಅರ್ಥವಾಗುತ್ತದೆ. ಸುಮ್ಮನೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಕಂದಾಯ ರೂಪದಲ್ಲಿ ವಸೂಲು ಮಾಡತಕ್ಕಂಥ ಕ್ರಮ ಎಂದರೆ ಇಂಥ ಸಂದರ್ಭದಲ್ಲಿ ಅವರಲ್ಲಿ ಆಸ್ತಿ ಇಲ್ಲದೆ ಇರಬಹುದು, ಆದರೆ ಕಾನೂನು ಪ್ರಕಾರ ಕ್ರಮ ತೆಗೆದು ಕೊಳ್ಳುತ್ತೇವೆಂದು ಹೇಳಿದರೆ ಕಂದಾಯ ರೀತಿಯಲ್ಲಿ ಪರಿಗಣಿಸಿ ವಸೂಲು ಮಾಡತಕ್ಕಂಥ ಕ್ರಮ ಕಾನೂನಿನಲ್ಲಿ ಇರುತ್ತದೆ. ಅದರಂತೆ ವಸೂಲು ಮಾಡುತ್ತೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ —ಬ್ಯಾಂಕ್ ಗ್ಯಾರಂಟಿ ಇರತಕ್ಕಂಥವರು ಇರುತ್ತಾರೆ. ಅಂಥವರಿಂದಲೂ ವಸೂಲು ಮಾಡುತ್ತೀರಾ?.

ಶ್ರೀ ಎಚ್. ಟಿ. ಕೃಷ್ಣಪ್ಪ.—ಎರಡು ತಿಂಗಳ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡು, ಒಂದು ತಿಂಗಳು ಕ್ಯಾಷ್ ಗ್ಯಾರಂಟಿ ತೆಗೆದುಕೊಂಡಿರುವುದಿದ್ದರೆ ಅದನ್ನು ತೋರಿಸುತ್ತಾರೆ, ತಪ್ಪುಮಾಡಿದ್ದರೆ ಅದನ್ನು ಒಪ್ಪಿಕೊಳ್ಳುತ್ತಾರೆ. ಸದ್ಯದಲ್ಲಿ ಬ್ಯಾಂಕ್ ಗ್ಯಾರಂಟಿ ಇಲ್ಲದೆ ಯಾರು ಪಾರ್ಟಿಸಿಪೇಟ್ ಮಾಡುವುದಕ್ಕೆ ಅವಕಾಶವಿಲ್ಲವೆಂದು ಖಡಾಖಂಡಿತವಾಗಿ ಹೇಳುತ್ತೇನೆ. ಎರಡು ತಿಂಗಳಂ ಬ್ಯಾಂಕ್

ಗ್ಯಾರಂಟಿ ತೆಗೆದುಕೊಂಡವರು ಒಂದು ತಿಂಗಳು ಕ್ಯಾಷ್ ಗ್ಯಾರಂಟಿಯನ್ನಿ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಎರಡು ತಿಂಗಳು ಮೂರು ತಿಂಗಳಿಗೆ ಏನೂ ತೊಂದರೆ ಬರುವುದಿಲ್ಲ.

ಶ್ರೀ ಪಟಪಟ್ಟಿಕ್ಕೆ ರತ್ನಾಕರ್ —ನಿಮ್ಮ ಕೃಪೆಯಿಂದ ದುಡ್ಡನ್ನು ಪಡೆದಿರತಕ್ಕಂಥವರು ಎಷ್ಟು ಜನರು ಇದ್ದಾರೆ ಅವರ ಬಗ್ಗೆ ಹೇಳಿ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಈಗ ನಿಮಗೆ ಯಾವ ಉತ್ತರಬೇಕು? ಹೆಸರುಗಳು ಬೇಕೋ, ಅಥವಾ ಬ್ಯಾಂಕ್ ಗ್ಯಾರಂಟಿಯ ಬಗ್ಗೆ ನಮ್ಮ ಸರ್ಕಾರದವರು ಏನು ಮಾಡಿದ್ದುದು ಅದನ್ನು ಹೇಳಬೇಕೋ ?

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮಂತ್ರಿಗಳ ಬೊಕ್ಕಸದಲ್ಲಿರತಕ್ಕಂಥ ಎಲ್ಲಾ ಉತ್ತರಗಳು ನಮಗೆ ಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಮಂತ್ರಿಗಳು ನಮ್ಮ ಪಾಯಿಂಟ್‌ಗೆ ಬರುತ್ತಿಲ್ಲ. ಅವರ ಕಷ್ಟ ನನಗೆ ಅರ್ಥವಾಗುತ್ತಿಲ್ಲ. ನಾನು ಕೇಳುತ್ತಿರತಕ್ಕಂಥದ್ದು ಬಾಕಿ ಉಳಿದವರ ಮೇಲೆ ಕ್ರಮ ತೆಗೆದುಕೊಳ್ಳುವಾಗ ಎರಡು ತಿಂಗಳು ಬ್ಯಾಂಕ್ ಗ್ಯಾರಂಟಿ ಮತ್ತು ಒಂದು ತಿಂಗಳು ಅರ್ನೆಸ್ಟ್ ಮನಿ ಡಿಪಾಸಿಟ್ ಎಂದು ತೆಗೆದುಕೊಂಡರೂ ಬ್ಯಾಂಕ್ ಗ್ಯಾರಂಟಿ ಇರತಕ್ಕಂಥದ್ದು ನಾಲ್ಕುಕೋಟಿ ಎಂದು ಹೇಳಿದ್ದುದು ನಾಲ್ಕೂಪರೇ ಕೋಟಿ ಆಯಿತು. ಉಳಿದವರಲ್ಲಿ ವಸೂಲು ಮಾಡುವ ವಿಷಯ ಏನು ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಉಳಿದದ್ದನ್ನು ವಸೂಲ್ಮಾಡುವ ಬಗ್ಗೆ ಹೇಗೆ ? ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಗಿಳಿಪಾಠ ಹೇಳಿದರೆ ಆಗುವುದಿಲ್ಲ. ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಪ್ರಕಾರ ವಸೂಲಾಗಬೇಕಾದರೆ ಅದಕ್ಕೆ ಏನಾದರೂ ಆಸೆಟ್ಸ್ ಇರಬೇಕು. ಇವರು ಹೇಳುವುದು ಖಾಲಿ ಬಾಟ್ಲಿ ಇಲ್ಲದಿರುವ ಸಂದರ್ಭದಲ್ಲಿ, ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಪ್ರಕಾರ ಮಾಡಿದೆವು, ಅಲ್ಲಿ ಯಾವುದೂ ಸಿಕ್ಕಲಿಲ್ಲವೆಂದರೆ ಆಯಿತಲ್ಲ. ಅದಕ್ಕೆ ನೀವು ಉತ್ತರಿಸಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಕಾನೂನು ಪ್ರಕಾರ ಏನು ಕ್ರಮ ಜರುಗಿಸಬೇಕೋ ಅದು ಆಯಿತು. ನಾವು ಕ್ರಮ ಜರುಗಿಸಿದ ನಂತರ ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತೆಗೆದು ಕೊಂಡಿದ್ದಾರೆ ೨೬ ಕೋಟಿ ರೂಪಾಯಿಗಳು ಹಾಗೆಯೇ ನಿಂತುಹೋಯಿತು. ಉಳಿದುದ್ದಕ್ಕೂ ಕ್ರಮ ಜರುಗಿಸಿದ್ದೇವೆ ಕಂತುಗಳ ಮೇಲೆ ಕಟ್ಟುವುದಕ್ಕೆ, ಸರ್ಕಾರ ವಿವೇಚನಾ ಶಕ್ತಿಯನ್ನು ಉಪಯೋಗಿಸಿ ಅವಕಾಶ ಮಾಡಿ ಕೊಟ್ಟಿರತಕ್ಕ ಸಂದರ್ಭಗಳು ಉಂಟು.

ಅಧ್ಯಕ್ಷರು.—ಮಾನ್ಯ ಖರ್ಗೆಯವರೇ ಅವರು ಹೇಳುವುದು ಮಂಗಿಯಲಿ. ಮಂತ್ರಿ ತಮಗೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ದಯವಿಟ್ಟು ಈಗ ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಅವರ ಹೆಸರುಗಳನ್ನು ಹೇಳಿ. ತಾರತಮ್ಯ ಏಕೆ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ತಾರತಮ್ಯ ಮಾಡುವ ಪ್ರಶ್ನೆ ಇಲ್ಲ ಎಲ್ಲರ ಮೇಲೂ ಒಂದೇ ಕ್ರಮ ತೆಗೆದುಕೊಂಡಿದ್ದೇವೆ. ಕೆಲವು ಬಾಕಿದಾರರು ಕಂತುಗಳ ಮೂಲಕ ಕಟ್ಟುತ್ತೇವೆಂದು ಹೇಳಿದವರಿಗೆ ಅವಕಾಶ ಕೊಟ್ಟಿದ್ದೇವೆ. ಬಹುಶಃ ಅವರು ೯ ಜನ ಕಂಟ್ರಾಕ್ಟರುಗಳು ಎಂದು ಕಾಣುತ್ತದೆ. ಅವರು ಯಾರು ಯಾರು ಎಂದರೆ, ಹೆಚ್. ದಾಸಪ್ಪ ಅಂಡ್ ಸನ್ಸ್, ಅವರದ್ದು ಆನೇಕಲ್ ತಾಲ್ಲೂಕಿನಲ್ಲಿ ೪,೨೦,೨೯೧ ರೂ. ಕನಕಪುರ ತಾಲ್ಲೂಕಿನಲ್ಲಿ ೬,೮೫,೦೦೦ ರೂಪಾಯಿ ರಾಮನಗರ ತಾಲ್ಲೂಕಿನಲ್ಲಿ ೬,೦೦,೨೦೦ ರೂಪಾಯಿ ಮಾಗಡಿ, ಚನ್ನಪಟ್ಟಣ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ೧೭,೨೦,೦೦೦ ರೂಪಾಯಿಗಳು.

ಶ್ರೀ ರಾಜೇಶ್ವರಿ ಎಂಟರ್‌ಪ್ರೈಸಸ್ ಅವರದ್ದು ಬೆಂಗಳೂರು ನಾರ್ತ್ ಮತ್ತು ಸೌತ್, ಹೊಸಕೋಟೆ ಹಾಗೂ ನೆಲಮಂಗಲ ತಾಲ್ಲೂಕಿನಲ್ಲಿ ೧೯೮೫-೮೬ನೇ ಸಾಲಿಗೆ ಸಂಬಂಧಪಟ್ಟಿದ್ದು ೪ ಕೋಟಿ ಅಲ್ಲ ೪ ಲಕ್ಷದ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲಕ್ಷಕ್ಕೂ ಲಕ್ಷ್ಯವಿಲ್ಲ, ಕೋಟಿಗೂ ಗಮನವಿಲ್ಲ.

ಅಧ್ಯಕ್ಷರು.—ಸ್ವಲ್ಪ ನೋಡಿ ಹೇಳಿ, ಕೋಟಿಯೋ ಲಕ್ಷವೋ ..

(ಗೊಂದಲ)

ಅಧ್ಯಕ್ಷರು.—ನಿಮಗೆ ಉತ್ತರ ಬೇಕೋ ಬೇಡವೋ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಉತ್ತರ ಕೇಳತಕ್ಕ ತಾಳ್ಮೆ ಇದ್ದರೆ ಹೇಳುತ್ತೇನೆ ಅಡ್ಡಿ ಮಾಡಿದರೆ ಅಷ್ಟರಮಟ್ಟಿಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ತಾಳ್ಮೆಯಿಂದ ವರ್ತಿಸದಿದ್ದರೆ ಸಭೆಯನ್ನು ಮುಂಕ್ಕಾಯ ಮಾಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅವರು ಹೇಳುವುದನ್ನು ಒಂದು ಪಟ್ಟಿ ಮಾಡಿ ಎಲ್ಲರಿಗೂ ಕಾಪಿ ಕೊಡಲಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸುಭಾಷ್ ಎಂಟರ್‌ಪ್ರೈಸಸ್ ಅವರದ್ದು ಅನೇಕಲ್ ತಾಲ್ಲೂಕಿನಲ್ಲಿ ೩,೫೬,೨೦೦ ರೂಪಾಯಿಂಗಳಿರಿ.

ಅಧ್ಯಕ್ಷರು.—ಪಟ್ಟಿ ಮಾಡಿಸಿಕೊಡುತ್ತೀರಾ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾಡಿಸಿಕೊಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದನ್ನು ತೆಗೆದುಕೊಂಡು ಉಪ್ಪಿನಕಾಯಿ ಹಾಕೋಣವೇ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಿಮಗೆ ಹೇಳೋಣವೇ ಅವರಿಗೆ ಹೇಳೋಣವೇ ? ಎಷ್ಟು ಹೇಳಿದರೂ ನಿಮಗೆ ಸಮಜಾಯಿಷಿ ಇಲ್ಲ.

ಶ್ರೀ ಜಿ. ಎಂ. ಕಾಸಡೆ.—ನೀವು ಹೇಳುತ್ತೀರೋ ಇಲ್ಲವೋ ? ಹೆಸರು ಹೇಳಿ ?

ಅಧ್ಯಕ್ಷರು.—ತಾವು ೫ ನಿಮಿಷದಲ್ಲಿ ಮುಂಗಿಸಿಬಿಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಗುರಪ್ಪ, ದೇವನಹಳ್ಳಿ, ೯ ಲಕ್ಷ ೩೦ ಸಾವಿರ. ದಾಸಪ್ಪ ಅಂಡ್ ಸನ್ಸ್, ಕನಕಪುರ, ೧೨ ಲಕ್ಷ ೩೫ ಸಾವಿರ. ೧೯೮೫-೮೬ ರದ್ದು ಮಾಗಡಿ ೮ ಲಕ್ಷ ೫ ಸಾವಿರದ ೩೫೦, ಚನ್ನಪಟ್ಟಣ ೧೦,೨೦,೪೫೦, ದೊಡ್ಡಬಳ್ಳಾಪುರ ೮,೭೦,೫೨೫. ರಾಮನಗರ ೯,೨೩,೨೦೦. ೧೯೮೬-೮೭ ರದ್ದು ದಾಸಪ್ಪ ಅಂಡ್ ಸನ್ಸ್ ೧೨,೪೯,೪೮೦ ರೂಪಾಯಿ. ಅಧ್ಯಕ್ಷರೇ, ಇಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಬಾಕಿಗೆ ಸಂಬಂಧಪಟ್ಟಿಹಾಗೆ ಹೇಳುವುದಾದರೆ ಒಂದು ತಿಂಗಳಿಗೆ ೫೦ ಲಕ್ಷ ರೂಪಾಯಿನಂತೆ ಅವರು ಬಾಕಿ ಕೊಡುತ್ತಿದ್ದಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾರು ?

ಶ್ರೀ ಎಚ್. ಟಿ. ಕೃಷ್ಣಪ್ಪ.—ದಾಸಪ್ಪ ಅಂಡ್ ಸನ್ಸ್. ತಿಂಗಳಿಗೆ ೫೦ ಲಕ್ಷ ರೂಪಾಯಿನಂತೆ ಕಳೆದ ೬, ೭ ತಿಂಗಳಿಂದ ಕೊಡುತ್ತಾ ಬಂದಿದ್ದಾರೆ. ಅದನ್ನು ನಿಮ್ಮ ಗಮನಕ್ಕೆ ತಂದೆ. ಬಾಕಿ ಮೊಬಲಗಿನ ಪೈಕಿ ನಿಮ್ಮ ಕೈಯಲ್ಲಿ ಏನೂ ವಸೂಲು ಮಾಡುವುದಕ್ಕೆ ಆಗಿಲ್ಲ ಎಂದು ಹೇಳಿದ್ದಾರೆ. ಇಷ್ಟಾದರೂ ಮಾಡುತ್ತಿದ್ದಾರಲ್ಲ ಎಂದು ಹೇಳಿದೆ ಏನೂ ಮಾಡಿಲ್ಲ ಎಂದು ಹೇಳುತ್ತಾರೆ. ಇದೂ ವಸೂಲಿ ಮಾಡದಿದ್ದರೆ ಏನು ಮಾಡುತ್ತಿದ್ದೀರಿ ? ಅವರಿಗೆ ಜವಾಬ್ದಾರಿಯೂ ಇಲ್ಲ, ಏನೂ ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಯಾರ ಉಪಕಾರಕ್ಕಾಗಿ ಮಾಡುತ್ತಿದ್ದೀರಿ ? ಸರ್ಕಾರ ನಡೆಸುತ್ತಿದ್ದೀರಿ, ಮಾಡುತ್ತಿದ್ದೀರಿ. ವಿರೋಧ ಪಕ್ಷದವರಿಗೆ ದೊಡ್ಡ ಉಪಕಾರ ಮಾಡಿದಹಾಗೆ ಹೇಳುತ್ತೀರಲ್ಲ ಅದೂ ಮಾಡದೇಹೋದರೆ ಏನು ಮಾಡುತ್ತೀರಿ ಎಂದು. ಅದೂ ಮಾಡದೇಹೋದರೆ ಜನ ನಿಮ್ಮನ್ನು ಹೊಡೆದು ಹೊರಗಡೆ ಹಾಕುತ್ತಾರೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಹು, ಹಾಕುತ್ತಾರೆ.

ಅಧ್ಯಕ್ಷರು.—ನಾನು ಸಭೆಯನ್ನು ಮುಂಕ್ಕಾಯ ಮಾಡುತ್ತೇನೆ, ಹೇಗಾದರೂ ಮಾಡಿ.

ಶ್ರೀ ಪಟವಂಕ್ಕಿ ರತ್ನಾಕರ್.—ಸಚಿವರ ಕೃಪೆ ಇದ್ದರೆ ಅಬ್ಯಾರಿ...

ಅಧ್ಯಕ್ಷರು.—ನೀವು ಎದ್ದು ಹೀಗೆ ಗಲಾಟೆ ಮಾಡುವುದು ಏತಕ್ಕೆ ? ಹೊಸಬರು ಎಂದು ಅವಕಾಶ ಕೊಟ್ಟರೆ ಏನು ಬೇಕಾದರೂ ಮಾತನಾಡುತ್ತೀರಾ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಬೆಳಗಾಂ ಜಿಲ್ಲೆಗೆ ಸಂಬಂಧಪಟ್ಟಹಾಗೆ ಮಾಹಿತಿ ಒದಗಿಸಂತಿದ್ದೇನೆ.

ಅಧ್ಯಕ್ಷರು.—ಲಿಸ್ಟ್ ಕೊಡುವುದಕ್ಕೆ ಹೇಳುತ್ತೇನೆ ಎಲ್ಲರಿಗೂ. ಮಾನ್ಯ ಕೃಷ್ಣಪ್ಪನವರೇ, ಲಿಸ್ಟ್ ತಯಾರು ಮಾಡಿ ಈ ಕಡೆಯವರಿಗೆ, ಆ ಕಡೆಯವರಿಗೆ ಕೊಡಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರಾಜ್ಯಪಾಲರ ಭಾಷಣಕ್ಕೆ ಮಾನ್ಯ ದೇವೇಗೌಡರು ಉತ್ತರ ಕೊಟ್ಟರು. ಜಡ್ಜ್‌ಮೆಂಟ್ ಕಾಪಿ ತಂದು ದಾಸಪ್ಪ ಅಂಡ್ ಸನ್ಸ್ ಎಷ್ಟು ಕೊಡುಬೇಕು ಅವರು ಮಾಡುತ್ತಿರುವ ಅನ್ಯಾಯ ಏನು, ಒಂದು ಎಂ.ಎಲ್.ಗೆ ವ್ಯತ್ಯಾಸ ಮಾಡುತ್ತಿದ್ದಾರೆ ಎಂದು ವಿವರವಾಗಿ ಹೇಳಿದೆ. ಅದಕ್ಕೆ ದೇವೇಗೌಡರು ಉತ್ತರ ಕೊಡಲಿಲ್ಲ. ಚೀಫ್ ಮಿನಿಸ್ಟರ್ ಇರಲೇ ಇಲ್ಲ. ಮಾನ್ಯ ಕೃಷ್ಣಪ್ಪನವರು ಇದ್ದರೋ ಇಲ್ಲವೋ ಗೊತ್ತಿಲ್ಲ. ಬ್ಯಾಂಕ್ ಗ್ಯಾರಂಟಿ ಇಲ್ಲ. ಏನೂ ಇಲ್ಲ. ಕೋರ್ಟ್‌ನವರು ಅವರು ಹರಾಜಿಗೆ ಬರಕೂಡದು ಎಂದು ಮಾಡಿದ್ದಾರೆ. ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತಿದೆ. ಒಂದಕ್ಕೂ ಲಕ್ಷ್ಯ ಇಲ್ಲ.

SRI H. T. KRISHNAPPA.—I dispute this statement. It is not a correct statement of fact. ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡಿದ್ದೇವೆ. ಹೈಯೆಸ್ಟ್ ಬಿಡ್ಡರ್ ಅವರು. ಹೈಕೋರ್ಟಿನವರು ಏತಕ್ಕೋಸ್ಕರ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಅಬ್ಯಾರಿ ಬೇಡಿಕೆ ಬಂದಾಗ ಇದನ್ನು ರಿಪೀಟ್ ಮಾಡುತ್ತೇನೆ

ಶ್ರೀ ಎಚ್. ಟಿ. ಕೃಷ್ಣಪ್ಪ.—ವಿರೋಧ ಪಕ್ಷದ ನಾಯಕರಿಗೆ ಹೇಳುತ್ತೇನೆ. ನಾಲ್ಕೂವರೆ ಕೋಟಿ ರೂಪಾಯಿಗಳ ಬಾಕಿ ಅವರದು ಎಂದರೆ ದಾಸಪ್ಪ ಅಂಡ್ ಸನ್ಸ್ ಅವರದಿದೆ.

ಅಧ್ಯಕ್ಷರು.—ಡೀಟೈಲ್ಸ್ ಆಮೇಲೆ ಕೊಡಿ.

ಶ್ರೀ ಎಚ್. ಟಿ. ಕೃಷ್ಣಪ್ಪ. —ಕಂತಿನ ಪ್ರಕಾರ ಬಾಕಿ ತೀರಿಸತಕ್ಕದನ್ನು ಮಾಡಿಕೊಂಡು ಬಂದಿದ್ದಾರೆ. ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಉಳಿದದ್ದು ಹೇಳಿ ?

ಅಧ್ಯಕ್ಷರು.—ಡಿಮ್ಯಾಂಡ್ ಬಂದಾಗ ಮಾತನಾಡಿ.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಹೆಸರು ಹೇಳುವುದಕ್ಕೆ ಹೆದರುತ್ತಾರಲ್ರಿ. ನಾಲ್ಕು ಕೋಟಿ ಇದ್ದದ್ದು ನಾಲ್ಕು ಲಕ್ಷ ಎಂದು ಹೇಳುತ್ತಾರೆ ನಾಳೆ ಡೂಪ್ಲಿಕೇಟ್ ಕೊಡುತ್ತಾರೆ. ಅದಕ್ಕಾಗಿ ಈಗಲೇ ಕರೆಕ್ಟಾಗಿ ಕೊಡಲಿ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ನಾನು ಈಗಾಗಲೇ ಪಟ್ಟಿ ಕೊಟ್ಟಿದೇನೆ. ಒಂದು ಕಾಪಿ ಮಾಡಿಸಿ ಎಲ್ಲರಿಗೂ ಕೊಡಿ ಎಂದು ತಾವು ಆದೇಶ ಕೊಟ್ಟಿದ್ದೀರಿ.

ಅಧ್ಯಕ್ಷರು.—ಶ್ರೀಮಂತಿ ನಾಗರತ್ನಮ್ಮನವರೇ, ಕಾಪಿ ಕೊಡಿಸುತ್ತೇನೆ. ಡಿಮ್ಯಾಂಡ್ ಬಂದಾಗ ಆ ಬಗ್ಗೆ ತಾವು ಮಾತನಾಡಬಹುದು.

ಶ್ರೀ ಗೋಪಾಲ ಮುಂಕುಂದ ಕಾನಡೆ.—ಆದಾಗುವುದಿಲ್ಲ. ಅವರು ಹೆಸರು ಹೇಳುವುದಿಲ್ಲ ಎಂದರೆ ಹೇಗೆ ? ಹೆಸರು ಹೇಳುವವರೆಗೆ ಬಿಡುವುದಿಲ್ಲ.

೫-೩೦ ಪಿ.ಎಂ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅದು ಬಹಳ ದೊಡ್ಡದು ಇದೆ. ೭-೮ ಪುಟ ಇದೆ.

ಅಧ್ಯಕ್ಷರು.—೭-೮ ಪುಟ ಇದೆಯಂತೆ. ನಾಳೆ ಅದನ್ನು ಎಲ್ಲರಿಗೂ ಹಂಚಿಸುವ ವ್ಯವಸ್ಥೆಯನ್ನು ಮಾಡುತ್ತೇನೆ. ನಾಳೆ ಇಲಾಖೆಯ ಡಿಮಾಂಡ್ ಬಂದಾಗ ಹೇಳುವಿರಂತೆ.

ಶ್ರೀ ಗೋಪಾಲ ಮುಂಕುಂದ ಕಾನಡೆ.— ನಾಳೆ ಬೆಳಿಗ್ಗೆ ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ಕೊಡುತ್ತೇನೆ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇಲ್ಲದಿದ್ದರೆ ನಾಳೆ ಬೆಳಿಗ್ಗೆ ನಿಮ್ಮ ಎದುರು ಇರುವಂತಹ ಜಾಗದಲ್ಲಿ ಬಂದು ಕೂಡಬೇಕಾಗುತ್ತದೆ.

ಅಧ್ಯಕ್ಷರು.—ಆಯಿತು. ಇಲ್ಲಿಗೆ ಈ ವಿಷಯ ಮುಂಕ್ಕಾಯವಾಯಿತು. ಈಗ ಸಭೆಯನ್ನು ಮುಂದೂಡಿದ್ದೇನೆ. ನಾಳೆ ಬೆಳಿಗ್ಗೆ ಪುನ: ಸಭೆಯು ೧೧ ಗಂಟೆಗೆ ಸೇರುತ್ತದೆ.

(ಸಭೆಯು ೫-೩೨ಕ್ಕೆ ಮುಂಕ್ಕಾಯಂವಾಗಿ ನಾಳೆ ಬೆಳಗ್ಗೆ ದಿನಾಂಕ ೪-೩-೧೯೮೭ ರಂದು ಬೆಳಿಗ್ಗೆ ಪುನಃ ೧೧ ಗಂಟೆಗೆ ಸಮಾವೇಶಗೊಳ್ಳುವ ನಿಶ್ಚಯಿಸಿತು).